ಒಂಟಿ ದೆವ್ವವನ್ನಾಗಿಸಿಬಿಟ್ಟರು ಎಂದು ಶಪಿಸುತ್ತಲೇ ಇದ್ದಳು. ಯಾರನ್ನ? ಹವ್ಯಾಸಕ್ಕೆ ಅಂಟಿಕೊಂಡ ಅಪ್ಪನನ್ನೋ? ಮರುಮದುವೆಯ ಪ್ರಸ್ತಾಪವನ್ನು ತಂದಿದ್ದ ಶ್ರೀಧರಮೂರ್ತಿಗಳನ್ನೋ, ಅಪಮಾನಿಸಿದ ಅಜ್ಜಯ್ಯನನ್ನೋ? ಸಂಪ್ರದಾಯವನ್ನೋ? ಸಮಾಜವನ್ನೋ? ವಿಧಿಯನ್ನೋ?... ನಮಗೂ ತಂದೆ ಇಲ್ಲದೆ ಇರುವುದೊಂದು ದೊಡ್ಡ ಕೊರತೆ ಆಗಿತ್ತು ಅಲ್ಲವೆ?"

ಪರಿಯ ಅಂಗೈಯಲ್ಲಿ ತನ್ನ ಅಂಗೈ ಒತ್ತಿ ಮಾತು ಮುಂದುವರಿಸಿದ್ದಳು, ಅಕ್ಕ:

"ನಿಜ ಹೇಳು, ನಿನ್ನ ಮಗಳು ತಂದೆಯ ಕೊರತೆಯಲ್ಲಿಯೇ ದೊಡ್ಡವಳಾಗುತ್ತಿದ್ದಾಳೆ ಎಂದು ನಿನಗೆ ಅನ್ನಿಸಲೇ ಇಲ್ಲವೇ? ಇವತ್ತಿಗೂ ಇದನ್ನೆಲ್ಲಾ ಸರಿಹೊಂದಿಸಲು ತಡವಾಗಿದೆ ಎಂದು ಅನ್ನಿಸುತ್ತಿಲ್ಲ. ಸಮ್ಮತಿ ಇನ್ನೂ ಪುಟ್ಟ ಹುಡುಗಿ; ಹಾಲು ಮನಸ್ಸಿನ ಹಸುಳೆ ಅವಳು. ಅಮ್ಮನ ನಿರ್ಧಾರವನ್ನು ವಿಮರ್ಶೆ ಮಾಡುವ ವಯಸ್ಸಲ್ಲ ಅವಳದ್ದು. ನಿನ್ನ ಆಯ್ಕೆಯ ಹೊಸ ಬದುಕಿಗೆ ಕ್ರಮೇಣ ಹೊಂದಿಕೊಂಡು ದೊಡ್ಡವಳಾಗುತ್ತಾಳೆ. ಇನ್ನು, ಅವಳ ಸ್ವಂತ ಅಭಿಪ್ರಾಯಕ್ಕೆ ಕಾಯಬೇಕೆಂದರೆ, ಅವಳು ಕಾಲೇಜು ಮುಗಿಸಿ, ತನ್ನ ಮದುವೆಯ ವಯಸ್ಸಿಗೆ ಬರಬೇಕು. ಆಮೇಲೂ ಅವಳು ನಿನ್ನ ಮದುವೆಗೆ ಒಪ್ಪುತ್ತಾಳೆ

